

# ರಿಗ್ರೆಟ್ ಇಲ್ಲ, ಹೆಮ್ಮೆ ಇದೆ

## ‘ಸಿಂಗಲ್ ಮದರ್’ ಕವಿತಾ ಲಂಕೇಶ್ ಮನದ ಮಾತು

**ಕವಿತಾ ಲಂಕೇಶ್ ಕನ್ನಡ ಚಿತ್ರರಂಗದ ಪ್ರಸಿದ್ಧ ಸಿನಿಮಾ ನಿರ್ದೇಶಕಿ. ‘ದೇವೀರಿ’ ‘ಬಿಂಬ’, ‘ಪ್ರೀತಿ ಪ್ರೇಮ ಪ್ರಣಯ’, ‘ಅವ್ವ’, ‘ಕರಿಯ ಕಣ್ ಬಿಟ್ಟ’ ಅವರ ನಿರ್ದೇಶನದ ಕೆಲವು ಚಿತ್ರಗಳು. ಸಿದ್ಧ ಜಾಡಿನಲ್ಲಿ ಹೋಗಲು ಬಯಸದ ಕವಿತಾ ಕೌಟುಂಬಿಕ ಜೀವನದಲ್ಲೂ ಭಿನ್ನ ದಾರಿ ಆರಿಸಿಕೊಂಡವರು. ಒಂಟಿ ತಾಯಿಯಾಗಿ ಮಗಳನ್ನು ಬೆಳೆಸುವ ಸವಾಲನ್ನು ಪ್ರೀತಿಯಿಂದಲೇ ಒಪ್ಪಿಕೊಂಡು ನಿರ್ವಹಿಸಿದವರು. ಮದುವೆಯಾಗದೆ ಉಳಿಯುವ ತಮ್ಮ ಆಯ್ಕೆ ಹಾಗೂ ಮಗು ಬೆಳೆಸಿದ ಸವಾಲು ಸೇರಿದಂತೆ ‘ಸಿಂಗಲ್ ಪೇರೆಂಟ್ ಮದರ್’ ಕುರಿತಂತೆ ‘ಸುಧಾ’ ಓದುಗರಿಗಾಗಿ ಕವಿತಾ ಹಲವು ಸಂಗತಿಗಳನ್ನು ಹಂಚಿಕೊಂಡಿದ್ದಾರೆ. ಅವರ ಅನುಭವ ಕಥನ ಹಾಗೂ ವಿಚಾರಗಳು ‘ಒಂಟಿ ತಾಯಂದಿರು’ ಕುರಿತು ಗೌರವ ಮೂಡಿಸುವಂತಿವೆ.**

**■ ನಿರೂಪಣೆ: ಮಂಜುಶ್ರೀ ಎಂ. ಕಡಕೋಳ**

‘ಸಿಂಗಲ್ ಮದರ್’ ಆಗಿರುವುದರ ಬಗ್ಗೆ ಒಂದೆಡೆ ಸಂತೋಷವೂ, ಮತ್ತೊಂದೆಡೆ ಬೇಸರವೂ ಇರುತ್ತದೆ. ಆದರೆ, ಇಪ್ಪತ್ತು ವರ್ಷಗಳ ಹಿಂದೆ ನಾನು ನನ್ನ ಮಗಳಿಗಾಗಿ ತೆಗೆದುಕೊಂಡ ನಿರ್ಧಾರದ ಬಗ್ಗೆ ನನಗೆ ಕಿಂಚಿತ್ತೂ ಬೇಸರವಿಲ್ಲ. ವಿಷಾದವಿಲ್ಲ. ನನ್ನ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ ತೃಪ್ತಿ ಇದೆ.

ಮೊದಲ ಮದುವೆ ವಿಚ್ಛೇದನದಲ್ಲಿ ಮುಕ್ತಾಯವಾಗಿತ್ತು. ಇಬ್ಬರಲ್ಲೂ ಹೊಂದಾಣಿಕೆಯ ಸಮಸ್ಯೆಯಿತ್ತು. ಮತ್ತೊಂದು ಮದುವೆಯಾಗುವ ಸಾಹಸಕ್ಕೆ ಮನಸು ಒಪ್ಪಲಿಲ್ಲ. ನಮ್ಮ ಸಮಾಜದಲ್ಲಿ ಗಂಡ–ಹೆಂಡತಿ ಅಂದರೆ ಹೀಗೇ ಇರಬೇಕೆಂಬ ಸಿದ್ಧ ಮಾದರಿ ಇದೆ. ಆದರೆ, ನನಗೆ ಆ ಚೌಕಟ್ಟಿನಲ್ಲಿ ಬದುಕುವುದು ಕಷ್ಟ ಅನಿಸಿತ್ತು. ಹಾಗಾಗಿ, ವಿಚ್ಛೇದನದ ನಂತರ ಕೆಲಕಾಲ ಸುಮ್ಮನಿದ್ದೆ. ಆದರೆ, ನನಗೆ 38 ವರ್ಷ ಆಗುವ ಹೊತ್ತಿಗೆ ತಾಯ್ತನದ ತುಡಿತ ಶುರುವಾಯಿತು. ಮದುವೆಯಾಗದೇ ತಾಯಿಯಾಗುವ ಕುರಿತು ನಮ್ಮ ಕುಟುಂಬದವರ ಜತೆಗೆ ಚರ್ಚಿಸಿದೆ. ಆ ವೇಳೆಗೆ ಅಪ್ಪ ತೀರಿಹೋಗಿದ್ದರು. ಬಹುಶಃ ಅಪ್ಪ ಇದ್ದಿದ್ದರೆ ನನ್ನ ನಿರ್ಧಾರದ ಬಗ್ಗೆ ಹೆಮ್ಮೆಪಡುತ್ತಿದ್ದರು ಅನಿಸುತ್ತೆ. ಎಲ್ಲೆಡೆ ಹೇಳಿಕೊಂಡು ಬರ್ತಾ ಇದ್ದರೋ ಏನೋ, ‘ನೋಡಿ, ನನ್ನ ಮಗಳು ಎಷ್ಟು ಧೈರ್ಯವಂತೆ’ ಅಂತ. ಅವರು ಸ್ತ್ರೀವಾದಿ ಆಗಿದ್ದರಿಂದ ಖಂಡಿತಾ ನನ್ನನ್ನು ಬೆಂಬಲಿಸುತ್ತಿದ್ದರು.

ನನಗೆ ಅಮೆರಿಕದ ರಾಬರ್ಟ್ ಪರಿಚಯವಾಗಿತ್ತು. ಮದುವೆಯಾಗದೇ ಮಗು ಮಾಡಿಕೊಳ್ಳುವ ಬಗ್ಗೆ ಆತನೊಂದಿಗೂ ಚರ್ಚಿಸಿದೆ. ಮನೆಯವರೂ ಬೆಂಬಲಿಸಿದರು. ಆದರೆ, ಅಮ್ಮನಿಗೆ ನಾನು ಮತ್ತೆ ಮದುವೆಯಾಗಬೇಕೆಂಬ ಆಸೆ ಇತ್ತು. ಆದರೆ, ನನಗೆ ಮತ್ತೆ ಆ ಜಂಜಾಟವೇ ಬೇಡ ಅನಿಸಿತ್ತು. ಹಾಗಾಗಿ, ಸಿಂಗಲ್ ಮದರ್ ಆಗಬೇಕೆಂದು ನಿರ್ಧರಿಸಿದೆ. ರಾಬರ್ಟ್‌ಗೂ ಈ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದೆ. ಲಾಂಗ್ ಡಿಸ್ಟೆನ್ಸ್, ಅನುಮಾನ, ಸಂಶಯ, ನಂಬಿಕೆಗಳ ಪ್ರಶ್ನೆ, ಇವೆಲ್ಲವನ್ನೂ ಯೋಚಿಸಿಯೇ ಮದುವೆ ಆಗೋದು ಬೇಡ ಅಂತ ನಿರ್ಧರಿಸಿದೆ.

ಇಶಾ ನನ್ನ ಹೊಟ್ಟೆಯಲ್ಲಿದ್ದಾಗ ನಾನು ‘ಮಾಲ್ಗುಡಿ ಡೇಸ್’ ಚಿತ್ರೀಕರಣದಲ್ಲಿದ್ದೆ. ಆಗ ನಾನು ಗರ್ಭಿಣಿಯಾಗಿದ್ದೆ ಅಂತ ಸೆಟ್‌ನಲ್ಲಿದ್ದವರಿಗೆ ಗೊತ್ತಿರಲಿಲ್ಲ. ಶೂಟಿಂಗ್ ನಡೆಯುವಾಗ ಆಗಾಗ ನನಗೆ ಹಸಿವು ಆಗುತ್ತಿತ್ತು. ನಮ್ಮ ಪ್ರೊಡಕ್ಷನ್